ಡೆಪ್ಯುಟೇಷನ್ ಮೇಲೆ ಹಾಕಿದ್ದರೂ ಅವರಿಗೆ ಪ್ರಯಾಣ ಭತ್ಯ ಕೊಡುವುದಿಲ್ಲ ಎಂದು ತಿಂಗಳ ಗೊಮ್ಮೆಯೂ ಅಲ್ಲಿಗೆ ಅವರು ಹೋಗುತ್ತಿಲ್ಲ. ಇದರ ಬಗ್ಗೆ ಗಮನ ಹರಿಸಬೇಕು

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಪರಿಶೀಲನೆ ಮಾಡಿ ಸರಿ ಮಾಡುತ್ತೇನೆ.

ಶ್ರೀ ಕುಶಾಲ.—ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಸಂಜೆ ೮ ಗಂಟೆಗೆ ಕೊಡಬೇಕಾದ ಆಹಾರವನ್ನು ಮಧ್ಯಾಹ್ನ ೪ ಗಂಟೆಗೆ ಕೊಡುವ ಪದ್ಧತಿ ಇಟ್ಟುಕೊಂಡಿದ್ದಾರೆ. ಆ ಆಸ್ಪತ್ರೆಯಲ್ಲಿ ಸ್ಯಾನಿಟರಿ ವರ್ಕರ್ಸ್ ಎಂದು ನೇಮಕ ಮಾಡಿಕೊಂಡಿರುವರ ಕೈಯಲ್ಲಿ ಆಟೆಂಡರ್ ಕೆಲಸವನ್ನೂ ಮಾಡಿಸುತ್ತಿದ್ದು ಅವರು ೫ ಗಂಟೆಗೆ ಕೆಲಸ ಬಿಟ್ಟು ಹೋಗುವುದರಿಂದ ಆಲ್ಲಿಯ ರೋಗಿಗಳಿಗೆ ೪ ಗಂಟೆಗೆ ಅನ್ನ ಬಡಿಸುತ್ತಿದ್ದಾರೆ. ಆ ರೋಗಿಗಳು ಆದನ್ನು ಮುಚ್ಚಿಟ್ಟುಕೊಂಡು ೮ ಗಂಟೆಗೆ ಊಟ ಮಾಡುವ ಪ್ರಸಂಗ ಬಂದಿದೆ.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ನನ್ನ ಗಮನಕ್ಕೆ ಇವತ್ತು ತರುತ್ತಿದ್ದೀರಿ. ನೋಡಿ ಸರಿಪಡಿಸುತ್ತೇನೆ.

ಶ್ರೀ ಕೆ.ಬಿ. ಮಲ್ಲಪ್ಪ (ಅರಕಲಗೂಡು).—ಮಾನ್ಯ ಅಧ್ಯಕ್ಷರೆ, ಅರಕಲಗೂಡು ಪಟ್ಟಣದಲ್ಲಿ ಹೊಸದಾಗಿ ನಿರ್ಮಿಸಿರುವ ಟ್ಯಾಂಕ್ ಅಪಾಯ ಸ್ಥಿತಿಯಲ್ಲಿದ್ದು ಆದರಿಂದುಂಟಾಗುವ ತೊಂದರೆಯ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—ಅರಕಲಗೂಡು ಪಟ್ಟಣದ ಜನಸಂಖ್ಯೆ ೧೯೮೧ರ ಜನಗಣತಿಯ ಪ್ರಕಾರ ೧೧,೮೬೯ ಇದೆ. ಪಟ್ಟಣಕ್ಕೆ ಹೇಮಾವತಿ ನದಿಯಿಂದ ನೀರನ್ನು ಪಡೆದು ಶೋಧಿಸಿ ಪುರಜನರಿಗೆ ಪೂರೈಸಲಾಗುತ್ತಿದೆ. ಪಟ್ಟಣದ ನೀರು ಸರಬರಾಜನ್ನು ಉತ್ತಮಗೊಳಿಸಲು ಸರ್ಕಾರವು ೧೯೭೮ರಲ್ಲಿ ೮.೦೦ ಲಕ್ಷ ರೂ.ಗಳ ಅಂದಾಜಿನಲ್ಲಿ ಒಂದು ಯೋಜನೆಯೆನ್ನು ಮಂಜೂರು ಮಾಡಿತ್ತು. ಈ ಯೋಜನೆಯಲ್ಲಿ ಒಂದು ಲಕ್ಷ ಗ್ಯಾಲನ್ ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕನ್ನು ಹಾಗೂ ಹೆಚ್ಚಿನ ವಿತರಣಾ ಕೊಳವೆಗಳನ್ನು ಹಾಕುವ ಕೆಲಸಗಳನ್ನು ಸೇರಿಸಲಾಗಿದೆ. ಇದರಂತೆ ವಿತರಣಾ ಕೊಳವೆಗಳನ್ನು ಹಾಕುವ ಕೆಲಸ ಪೂರ್ಣಗೊಂಡಿದೆ. ಇದಲ್ಲದೆ ಸರ್ಕಾರಿ ಆಸ್ಪತ್ರೆ ಬಳಿಯಲ್ಲಿ ಒಂದು ಲಕ್ಷ ಗ್ಯಾಲನ್ ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕ್ ಪೂರ್ಣಗೊಂಡಿರುತ್ತದೆ. ಇದನ್ನು ಪರೀಕ್ಷಿಸಲು ಟ್ಯಾಂಕಿಗೆ ನೀರನ್ನು ತುಂಬಲು ಕೆಲವು ಭಾಗಗಳಲ್ಲಿ ನೀರು ಸೋರುವಿಕೆ ಕಂಡು ಬಂದಿತ್ತು. ಆದರೆ ಟ್ಯಾಂಕು ಅಪಾಯ ಸ್ಥಿತಿಯಲ್ಲಿ ಇರುವುದಿಲ್ಲ. ಗುತ್ತಿಗೆದಾರರಿಗೆ ಸೂಚನೆಯನ್ನು ನೀಡಿ ನೀರು ಸೋರುವಿಕೆಯನ್ನು ನಿಲ್ಲಿಸುವಂತೆ ಆದೇಶಿಸಲಾಗಿದೆ. ಆದರೆ ಗುತ್ತಿಗೆದಾರರು ಈ ಬಗ್ಗೆ ಕ್ರಮ ಕೈಗೊಂಡಿರುವುದಿಲ್ಲ. ಆದುದರಿಂದ ಬೇರೆ ಗುತ್ತಿಗೆದಾರರಿಗೆ ಈ ಕೆಲಸವನ್ನು ವಹಿಸಿ ನೀರು ಸೋರುವಿಕೆಯನ್ನು ನಿಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ತಿಂಗಳ ಅಂತ್ಯದ ವೇಳೆಗೆ ಈ ಕೆಲಸ ಮುಗಿಯುವ ನಿರೀಕ್ಷೆಯಿದೆ.

ಶ್ರೀ ಕೆ.ಬಿ. ಮಲ್ಲಪ್ಪ.—ಸ್ವಾಮಿ, ಮಾನ್ಯ ಮಂತ್ರಿಗಳು ಅಲ್ಲಲ್ಲಿ ನೀರು ಲೀಕ್ ಆಗುತ್ತಿದೆ ಎಂದು ಹೇಳಿದ್ದಾರೆ. ಅದು ಸರಿಯಲ್ಲ. ಅಲ್ಲಿ ಒಂದು ಪೈಪ್‌ನಲ್ಲಿ ನೀರು ಸೋರುತ್ತಿದೆ. ಅದಕ್ಕೆ ಸರಿಯಾದ ವ್ಯವಸ್ಥೆ ಮಾಡದೇ ಹೋದರೆ ಟ್ಯಾಂಕ್ ಬಹಳ ಬೇಗ ಬಿದ್ದುಹೋಗುತ್ತದೆ ಎಂಬುದು ನನ್ನ ಅಭಿಪ್ರಾಯ. ಅಕ್ಕಪಕ್ಕದಲ್ಲಿರತಕ್ಕ ಮನೆ ಜನಗಳು ಮನೆ ಬಿಟ್ಟು ದೂರ ಹೋಗಬೇಕೆಂದಿದ್ದಾರೆ. ವಾಸ ಮಾಡತಕ್ಕ ಮನೆಯ ಪಕ್ಕದಲ್ಲಿ ಟ್ಯಾಂಕ್ ಇದೆ. ಮತ್ತು ಅಲ್ಲೇ ಆಸ್ಪತ್ರೆ ಇದೆ. ಇದರಿಂದ ಆಸ್ಪತ್ರೆಗೆ ಕೂಡ ಅಪಾಯ ಇದೆ. ಈ ರೀತಿ ಇರುವುದರಿಂದ ಟ್ಯಾಂಕನ್ನು ತಕ್ಷಣ ರಿಪೇರಿ ಮಾಡಿಸಬೇಕು. ಇಲ್ಲದಿದ್ದರೆ ಬೇರೆಯದಾದರೂ ಕಟ್ಟಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅದಲ್ಲದೆ ಬಹಳ ದಿವಸದ ಹಿಂದೆ ಅಂದರೆ ಸುಮಾರು ೧೯೫೬-೫೭ರಲ್ಲಿ ಹೇಮಾವತಿ ನೀರು ಅರಕಲಗೂಡಿಗೆ ಸರಬರಾಜಾಯಿತು. ೩೦ ವರ್ಷದ ಹಿಂದಿನ ಯೋಜನೆ ಇದು. ಆಗ ಅಲ್ಲಿನ ಜನಸಂಖ್ಯೆ ೮-೧೦ ಸಾವಿರ ಇತ್ತು. ೧೯೮೧ರ ಜನಗಣತಿ ಪ್ರಕಾರ ೧೧ ಸಾವಿರ ಜನಸಂಖ್ಯೆ ಎಂದು ಹೇಳಿದ್ದಾರೆ, ಆದರೆ ಈಗ ೧೫-೨೦ ಸಾವಿರ ಆಗಿದೆ. ೩೦ ವರ್ಷದ ಹಿಂದಿನ ಪೈಪುಗಳನ್ನೇ ಉಪಯೋಗಿಸಿಕೊಂಡಿರುವುದರಿಂದ ಈ ರೀತಿ ತೊಂದರೆಯಾಗಿದೆ. ಬೂಸ್ಟರ್ ಪಂಪ್ ಅಲ್ಲಿ ಹಾಕಿದ್ದಾರೆ. ಆದರಿಂದ ನೀರನ್ನು ಪಂಪ್ ಮಾಡಿದರೆ ಮಧ್ಯ ಮಧ್ಯದಲ್ಲಿ ಕೆಸ್ತುಕೊಂಡು ಹೋಗುತ್ತಿದೆ. ಆದ್ದರಿಂದ ಅಲ್ಲಿ ಬೇರೆ ಲೈನ್ ಹಾಕಬೇಕು. ಅಲ್ಲಿ ಆರು ಇಂಚಿನ ಕಾಸ್ಟ್ ಐರನ್

ಪೈಪ್ ಹಾಕಿದ್ದಾರೆ. ಅದನ್ನು ಬದಲಾವಣೆ ಮಾಡಿ ೯ ಇಂಚಿನ ಪೈಪ್ ಅಥವಾ ಒಂದು ಅಡಿ ಪೈಪ್ ಹಾಕಿದರೆ ನೀರು ಸರಬರಾಜಿಗೆ ಅನುಕೂಲವಾಗುತ್ತದೆ. ಅದೇ ಪೈಪ್ ಉಪಯೋಗಿಸಿ ನೀರು ಕೊಡುತ್ತೇವೆಂದರೆ ತೊಂದರೆಯಾಗುತ್ತದೆ. ಆದ್ದರಿಂದ ಮೊದಲು ಪೈಪ್ ಬದಲಾವಣೆ ಮಾಡಬೇಕು. ಇದಕ್ಕೆ ೨೦ ಲಕ್ಷ ರೂಪಾಯಿಯ ಯೋಜನೆ ಇದೆ. ಆ ಯೋಜನೆಯನ್ನು ಮಂಜೂರು ಮಾಡಿ ಎಂದು ಮೊದಲಿನಿಂದಲೂ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು.—ನೀವು ಇಷ್ಟೊಂದು ವಿವರಣೆ ಕೇಳಿದರೆ ಹೇಗೆ?

ಶ್ರೀ ಕೆ.ಬಿ. ಮಲ್ಲಪ್ಪ.—ಅಲ್ಲಿನ ಪರಿಸ್ಥಿತಿ ಹೇಳುತ್ತಿದ್ದೇನೆ. ಕೂಡಿಯುವುದಕ್ಕೆ ನೀರಿಲ್ಲ. ಅಲ್ಲಿನ ಮುನಿಸಿಪಾಲಿಟಿಗೆ ೧೩-೧೪ ಹಳ್ಳಿಗಳು ಸೇರಿವೆ. ೧೫-೨೦ ಸಾವಿರ ಜನಸಂಖ್ಯೆ ಇದೆ. ಅದಕ್ಕೆ ಕೇವಲ ಒಂದು ಲಕ್ಷ ಗ್ಯಾಲನ್ ಕೆಪಾಸಿಟಿಯ ಟ್ಯಾಂಕ್ ಇದೆ. ಅದು ಅರ್ಧಂಬರ್ಧ ಸೋರುತ್ತಿದ್ದು ಈಗ ಉಪಯೋಗವಾಗುತ್ತಿಲ್ಲ. ಆದ್ದರಿಂದ ಬೇರೆ ಲೈನ್ ಹಾಕಿಸಿಕೊಟ್ಟು ಸರಿಯಾದ ರೀತಿಯಲ್ಲಿ ನೀರು ಸರಬರಾಜು ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀಸಾಗರ್.—ಮೂರು ಪ್ರಶ್ನೆಗಳನ್ನು ಉಪಪ್ರಶ್ನೆಗಳನ್ನಾಗಿ ಕೇಳಿದ್ದಾರೆ. ಕೊನೇ ಎರಡು ಪ್ರಶ್ನೆಗಳು ಇಪತ್ತು ಪ್ರಸ್ತಾಪ ಮಾಡಿರುವ ವಿಷಯಕ್ಕೆ ಸಂಬಂಧಪಟ್ಟಿರುವುದಿಲ್ಲ. ಅದಕ್ಕೆ ಬೇರೆ ಪ್ರಶ್ನೆ ಅಥವಾ ಬೇರೆ ರೂಪದಲ್ಲಿ ಪ್ರಸ್ತಾಪ ಮಾಡಿದರೆ ಉತ್ತರ ಕೊಡುತ್ತೇನೆ. ಮೊದಲನೇ ಪ್ರಶ್ನೆಗೆ ಉತ್ತರ ಹೀಗಿದೆ. ಅದರ ಬಗ್ಗೆ ಆತಂಕ ಪಡಬೇಕಾಗಿಲ್ಲ. ಸಂಶಯ ಪಡಬೇಕಾಗಿಲ್ಲ. ದುರಸ್ತಿ ಕಾರ್ಯ ಮಾಡಿಸುತ್ತೇನೆ. ಅಪಾಯ ಇದೆ ಎಂದು ಹೇಳಿದ್ದೀರಿ ಅದಕ್ಕೇನೂ ಭಯಪಡಬೇಕಾಗಿಲ್ಲ. ದುರಸ್ತಿ ಕಾರ್ಯ ಬೇಗ ಮಾಡಿಸಿ ನೀರು ಸರಬರಾಜು ಮಾಡುವ ವ್ಯವಸ್ಥೆ ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನೂ ಕೈಗೊಳ್ಳುತ್ತೇನೆ.

ಶ್ರೀ ಕೆ.ಬಿ. ಮಲ್ಲಪ್ಪ.—ಸರ್ಕಾರದಲ್ಲಿ ೨೦ ಲಕ್ಷ ರೂಪಾಯಿ ಅಂದಾಜಿನ ಯೋಜನೆ ಇದೆ. ಅದು ಲೈನ್ ಬದಲಾವಣೆ ಮಾಡುವ ಯೋಜನೆ. ಲೈನ್ ಬದಲಾವಣೆ ಮಾಡದೇ ಹೋದರೆ ನೀರು ಸರಬರಾಜು ಮಾಡುವುದಕ್ಕಾಗುವುದಿಲ್ಲ. ಸುಮಾರು ೧೫-೨೦ ಸಾವಿರ ಜನಸಂಖ್ಯೆ ಇರತಕ್ಕ ಟೌನಿಗೆ ಒಂದು ಲಕ್ಷ ಗ್ಯಾಲನ್ ಸಾಕಾಗುವುದಿಲ್ಲ. ಮತ್ತು ಅದೂ ಕೂಡ ಸರಿಯಾದ ವ್ಯವಸ್ಥೆಯಲ್ಲಿಲ್ಲ. ಹಳೇ ಟ್ಯಾಂಕಿಗೆ ಫುಲ್ ಮಾಡುವುದಕ್ಕೆ ಆಗುವುದಿಲ್ಲ. ಪಂಪ್, ಮೋಟಾರ್, ಲೈನ್ ದುರಸ್ತಿ ಬದಲಾವಣೆ ಮಾಡಬೇಕು. ಆಗ ಮಾತ್ರ ಸರಿಯಾಗಿ ನೀರು ಸರಬರಾಜು ಮಾಡಬಹುದು. ಹಳೇ ಪೈಪ್, ಪಂಪ್, ಮೋಟಾರ್ ಇಟ್ಟುಕೊಂಡು ನೀರು ಕೊಡುತ್ತೇವೆಂದರೆ ತೊಂದರೆಯಾಗುತ್ತಿದೆ. ಆದ್ದರಿಂದ ಅತೀ ವಿನಯದಿಂದ ಮತ್ತು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆಂದು ಮಂತ್ರಿಗಳು ಹೇಳಿದರು. ಇದೂ ಅದಕ್ಕೆ ಸಂಬಂಧಪಟ್ಟಿರುವುದರಿಂದ ಇದನ್ನೇ ಬೇರೆ ಪ್ರಶ್ನೆ ಎಂದು ತೀರ್ಮಾನಿಸಿಕೊಂಡು ಉತ್ತರ ಕೊಡಬಹುದು, ಮಾಡಿಸುತ್ತೇನೆ ಎಂದು ಹೇಳಬಹುದು ಅದರಿಂದ ತೊಂದರೆಯಾಗುವುದಿಲ್ಲ. ೨೦ ಸಾವಿರ ಜನಸಂಖ್ಯೆ ಇರುವ ಟೌನಿಗೆ ನೀರು ಸರಬರಾಜು ಮಾಡುವ ದೃಷ್ಟಿಯಿಂದ ಇದನ್ನು ಯೋಚನೆ ಮಾಡಬೇಕು. ಬೂಸ್ಟರ್ ಪಂಪ್ ಹಾಕಿದ್ದಾರೆ. ಆದರೂ ಪ್ರಯೋಜನವಾಗುತ್ತಿಲ್ಲ. ಅಲ್ಲಿ ಅನುಕೂಲವಾಗಬೇಕಾದರೆ ಲೈನನ್ನೇ ಬೇರೆ ಹಾಕಬೇಕು. ದೊಡ್ಡ ಡಯಾಮಿಟರ್ ಪೈಪುಗಳನ್ನು ಹಾಕಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಪ್ರಿಯಾಂಬಲ್ ಬೇಡ. ನೇರವಾಗಿ ಸ್ಪಷ್ಟೀಕರಣ ಕೇಳಿ.

ಶ್ರೀ ಕೆ.ಬಿ. ಮಲ್ಲಪ್ಪ.—೬ ಕಿಲೋಮೀಟರ್ ದೂರ ಇರುವುದನ್ನು ಬದಲಾವಣೆ ಮಾಡುವುದಕ್ಕೆ ದುಡ್ಡೇನೂ ಜಾಸ್ತಿಯಾಗುವುದಿಲ್ಲ. ಅಲ್ಲಿ ಇನ್ನೊಂದು ಕೆಲಸ ಆಗಿದೆ. ಡೆಪ್ಯುಟಿ ಕಮಿಷನರ್ ಅವರು ೮-೧೦.....

ಅಧ್ಯಕ್ಷರು.—ನೇರವಾಗಿ ಕೇಳಿ. ಎಷ್ಟು ಹೊತ್ತು ಒಂದೇ ವಿಷಯ ಹೇಳುತ್ತೀರಿ.

ಶ್ರೀ ಕೆ.ಬಿ. ಮಲ್ಲಪ್ಪ.—೨೫೦ ಅಡಿ ಬೋರ್‌ವೆಲ್ ತೆಗೆದಿದ್ದಾರೆ. ಆದರೂ ಒಂದು ತೊಟ್ಟು ನೀರು ಬರಲಿಲ್ಲ. ಹತ್ತಾರು ವರ್ಷಗಳಿಂದ ನೀರಿನ ಬವಣೆ ಇದೆ. ಹೇಮಾವತಿ ನದಿ ಪಕ್ಕದಲ್ಲಿ ಕೇವಲ ೬ ಕಿಲೋಮೀಟರ್ ದೂರ ಇರುವುದರಿಂದ ಲೈನ್ ಬದಲಾವಣೆ ಮಾಡಿದರೆ ಆ ಪಟ್ಟಣದವರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಅದನ್ನು ಮಾಡಿಸಿ ನೀರಿನ ಬವಣೆಯನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ನಾನೂ ಕೂಡ ವಿನಯಪೂರ್ವಕವಾಗಿ ಮನವಿ ಮಾಡಿ ಕೊಳ್ಳುತ್ತೇನೆ. ಟ್ಯಾಂಕ್ ಬಗ್ಗೆ ಪ್ರಶ್ನೆ ಕೇಳಿ ಈಗ ಲೈನ್ ಬಗ್ಗೆ ಕೇಳುತ್ತಿದ್ದಾರೆ. ಈ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಸಮರ್ಪಕವಾಗಿ ಉತ್ತರವನ್ನು ಕೊಡುತ್ತೇನೆ. ಆಮೇಲೆ ಪ್ರಶ್ನಾರ್ಥಕವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಗಮನದಲ್ಲಿಟ್ಟುಕೊಂಡು ಬೇಗ ತೀರ್ಮಾನ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

## ನಿಯಮ ೫೯ರ ಕೆಳಗೆ ಚರ್ಚೆ

### ೧) ಧಾರ್ಮಿಕ ಕೇಂದ್ರಗಳಲ್ಲಿ ಮದ್ಯದ ಅಂಗಡಿಗಳನ್ನು ನಿಷೇಧಿಸುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೇ, ಧಾರ್ಮಿಕ ಕೇಂದ್ರಗಳಲ್ಲಿ ಅಂದರೆ ಮಸೀದಿ, ದೇವಾಲಯ, ಚರ್ಚ್ ಇರುವ ಬಳಿಯಲ್ಲಿ ಮದ್ಯದ ಅಂಗಡಿ ತೆರೆಯಬಾರದೆಂಬ ಆದೇಶವಿದ್ದರೂ, ದಕ್ಷಿಣ ಕನ್ನಡದ ಕೆಲವು ಕಡೆ ಮದ್ಯದ ಅಂಗಡಿ ತೆರೆಯುವುದು ನಡೆಯುತ್ತಿದೆ. ಅದೇ ರೀತಿ ಶಾಲಾ ಕಾಲೇಜುಗಳ ಹತ್ತಿರ ಕೂಡ ಮದ್ಯದ ಅಂಗಡಿ ತೆರೆಯಬಾರದೆಂದಿದೆ. ಆದರೆ ಇದೀಗ ಹೆಜಮಾಡಿ ಕೊಡಿ (ಉಡುಪಿ ತಾಲೂಕು) ಎಂಬಲ್ಲಿ ಮಸೀದಿ ಮತ್ತು ಅರಬಿಕ್ ಶಾಲೆಯ ಬಳಿಯಲ್ಲಿ ಮದ್ಯದ ಅಂಗಡಿ ತೆರೆಯಲಾಗುವುದೆಂದೂ, ಇದನ್ನು ತಡೆಹಿಡಿಯಬೇಕೆಂದೂ, ಉದಯವಾಣಿ, ಪತ್ರಿಕೆಯು ೮.೮.೮೫ರ ಸಂಚಿಕೆಯಲ್ಲಿ ೨ಳ ಮಂದಿ ಸಹಿ ಹಾಕಿದ ಪತ್ರ ಪ್ರಕಟವಾಗಿದೆ. ಆದ ಕಾರಣ ಧಾರ್ಮಿಕ ಭಾವನೆಗೆ ಭಂಗ ಬರುವುದನ್ನು ತಪ್ಪಿಸಲು ಹೆಜ ಮಾಡಿಕೊಡಿ ಮಸೀದಿಯ ಬಳಿ ತೆರೆಯಲು ಉದ್ದೇಶಿಸಿದ ಮದ್ಯದ ಅಂಗಡಿಯನ್ನು ಬೇರೆ ಕಡೆಗೆ ವರ್ಗಾಯಿಸಿ, ಶಾಂತಿ ನೆಮ್ಮದಿ ಕಾಪಾಡುವ ಕುರಿತು ಅಬಕಾರಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಈ ಬಗ್ಗೆ ಅಬಕಾರಿ ಮಂತ್ರಿಗಳಿಗೆ ಹೇಳಿ ಅವರಿಗೆ ಉತ್ತರವನ್ನು ದೊರಕಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

### ೨) ಸಂಕೇಶ್ವರದಲ್ಲಿ ನರೆಹಾವಳಿಯಿಂದ ನೊಂದ ಜನರಿಗೆ ಪುನರ್ ನಿವೇಶನ

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.— (ಸಂಕೇಶ್ವರ) ಅಧ್ಯಕ್ಷರೇ ೧೯೮೩ರಲ್ಲಿ ಬಂದ ನೆರೆಹಾವಳಿಯ ಜನರಿಗಾಗಿ ಪುನರ್ ನಿವೇಶನ ಕೇಂದ್ರಗಳನ್ನು ನಿರ್ಮಿಸಿದ್ದು, ಆದರಲ್ಲಿ ಸಂಕೇಶ್ವರದ ನೆರೆ ಸಂತ್ರಸ್ತರ ಬಡಾವಣೆಯು ಭೂಸೇನೆ ನಿಗಮದಿಂದ ಮನೆಗಳನ್ನು ಕಟ್ಟಿಸಲು ಕೊಡಲಾಗಿದೆ. ಭೂಸೇನೆಯ ಇಲಾಖೆಯ ಅಡಿಯಲ್ಲಿ ಕಟ್ಟಿರುವ ಮನೆಗಳು ಈಗಾಗಲೇ ಮಳೆಯಿಂದ ಕುಸಿದು ಬೀಳುತ್ತಿದ್ದು ಫಲಾನುಭವಿಗಳು ಅಲ್ಲಿ ಹೋಗಿ ವಾಸಿಸಲು ಹಿಂಜರಿಯುತ್ತಿದ್ದಾರೆ.

೧೯೮೩ರ ನೆರೆ ಹಾವಳಿಯಲ್ಲಿ ನೊಂದ ಪಲವಾರು ಜನರಿಗೆ ಇಲ್ಲಿಯವರೆಗೆ ಮನೆ ಕಟ್ಟಿಸಿಕೊಡುವುದರಲ್ಲಿ ಸರಕಾರ ವಿಫಲಗೊಂಡಿದ್ದು ಜನರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ತೀವ್ರ ಕ್ರಮ ಕೈಕೊಳ್ಳದೇ ಇರುವುದು, ಜಮೀನನ್ನು ಸ್ವಾಧೀನ ಪಡಿಸಿಕೊಳ್ಳದೇ ಇರುವುದು, ಫಲಾನುಭವಿಗಳಿಗೆ ಬಾಳಿಕೆ ಬರುವ ಮನೆಗಳನ್ನು ಕಟ್ಟಿಸಿಕೊಡದೆ ಇರುವುದು, ಈ ಎಲ್ಲ ವಿಷಯಗಳಲ್ಲಿ ಯೋಗ್ಯ ಕ್ರಮ ಕೈಗೊಳ್ಳುವಂತೆ ತೀವ್ರತೆ ತರಲು ಸರಕಾರಕ್ಕೆ ಈ ಸೂಚನೆ ಕೊಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ರವಿನ್ಯೂ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಹೇಳುತ್ತೇನೆ.

### ೩) ಹಿರಿಯೂರಿನ ವೇದಾವತಿ ನದಿ ಸೇತುವೆಯನ್ನು ವಿಸ್ತರಿಸುವ ಬಗ್ಗೆ

ಶ್ರೀ ಆರ್. ರಾಮಯ್ಯ (ಹಿರಿಯೂರು).—ಅಧ್ಯಕ್ಷರೇ, ಹಿರಿಯೂರು ನಗರದ ಅಂಚಿನಲ್ಲೇ ಹರಿಯುವ ವೇದಾವತಿ ನದಿಗೆ ಅಡ್ಡಲಾಗಿ ಅತಿ ಪುರಾತನವಾಗಿ ಒಂದು ಸೇತುವೆಯನ್ನು ನಿರ್ಮಿಸಿದ್ದಾರೆ. ಇಂದು ಬೆಳೆದ ನಗರದ ಅವಶ್ಯಕತೆಗಾಗಲಿ ಅಥವಾ ಬೆಳೆದ ವಾಹನ ಸಂಖ್ಯೆಗಾಗಲೀ ಇದು ಅತಿ ಕಿರಿದಾಗಿದೆ. ಕೆಲವೊಮ್ಮೆ ಎರಡು ಕಡೆಯ ವಾಹನಗಳು ಏಕಕಾಲದಲ್ಲೇ ಸೇತುವೆಯಲ್ಲಿ ಪ್ರವೇಶಿಸಿದವೆಂದರೆ ಅವುಗಳನ್ನು ಹಾಯಿಸಲು ಪೋಲೀಸ್ ಪ್ರವೇಶಿಸಬೇಕಾಗಿದೆ. ಜೊತೆಗೆ ಅತಿ ವೇಗದಲ್ಲಿ ಚಲಿಸುವ ವಾಹನದಿಂದಾಗಿ ಪಾದಚಾರಿಗಳು ಸಹ ಸೇತುವೆಯ ಕಂಪನದಿಂದ ಭೀತಿಗೊಳ್ಳಬೇಕಾಗಿದೆ. ಅಂಚಿನಲ್ಲಿ ಮಳೆ ಬಂದು ನಿಂತ ನೀರು ಚಲಿಸುವ ವಾಹನಗಳಿಂದಾಗಿ ಓಕುಳಿಯಾಡಿದಂತಾಗಿ ರಾತ್ರಿಯು